ಅಧ್ಯಕ್ಷರು : ಸಚಿವರು ಬಹಳ ಸ್ಪಷ್ಟವಾಗಿ ಹೇಳಿದರೂ ಮತ್ತೆಮತ್ತೆ ಕೇಳುತ್ತಿದ್ದೀರಿ.

ಶ್ರೀ ಸಿ.ಎಂ. ಉದಾಸಿ : ಉತ್ತರವನ್ನು ಹೇಳುವಾಗ ನಾವು ಯಾವುದೇ ಒಂದು ಅಂಶವನ್ನೂ ಮುಚ್ಚಿಹಾಕಲು ಹೋಗಿಲ್ಲ.

xxx xxx xxx

ಶ್ರೀ ಸಿ.ಎಂ. ಉದಾಸಿ : ಇದನ್ನು ಅಧ್ಯಯನ ಮಾಡಿ, ಕಾನೂನು ಸಲಹೆ ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಆ) ವಿಷಯ : ಕಾನೂನು ಬಾಹಿರವಾಗಿ ಎರಡು ಸಂಘಗಳಲ್ಲಿ ಸದಸ್ಯ / ನಿರ್ದೇಶಕ ಸ್ಥಾನ ಹೊಂದಲು ಸಹಕರಿಸಿರುವ ಇಲಾಖಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ :

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಮೂಲ್ ನಿರ್ದೇಶಕರ ಸ್ಥಾನಕ್ಕೆ ದಿನಾಂಕ: 3–6–2009ರಂದು ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿರುವ ನಿರ್ದೇಶಕರೊಬ್ಬರು ಬೋಳಾರೆ ಗ್ರಾಮದವರಾಗಿದ್ದು, ಈ ನಿರ್ದೇಶಕರು ರಾವುಗೋಡ್ಲು ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿಯೂ ಸಹ ಕಾನೂನು ಬಾಹಿರವಾಗಿ ಸದಸ್ಯ ಸ್ಥಾನವನ್ನು ಹೊಂದಿರುತ್ತಾರೆ. ಎರಡೂ ಹಾಲು ಉತ್ಪಾದಕರ ಸಂಘದಲ್ಲಿ ಸದಸ್ಯರ/ ನಿರ್ದೇಶಕರ ಸ್ಥಾನ ಹೊಂದಲು ಸಹಕರಿಸಿರುವ ಇಲಾಖಾಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವುದರ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು) : ಹಿರಿಯ ಸದಸ್ಯರಾಗಿರುವ ಹೆಚ್.ಸಿ.ಬಾಲಕೃಷ್ಣರವರು ನಿಯಮ 73 ರಡಿಯಲ್ಲಿ ಕೋರಿರುವ ಪ್ರಶ್ನೆಗೆ ಉತ್ತರವನ್ನು ತಮ್ಮ ಮುಖೇನ ಒದಗಿಸುತ್ತಿದ್ದೇನೆ.

(xxx xxx xxx ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.)

ರಾವುಗೋಡ್ಲು ಹಾಲು ಉತ್ಪಾದಕರ ಸಹಕಾರ ಸಂಘವು ನೋಂದಣಿಯಾದಾಗ ಸುತ್ತಮುತ್ತಲಿನ ಗ್ರಾಮಗಳಲ್ಲಿ ಯಾವುದೇ ಸಹಕಾರ ಸಂಘಗಳಿರಲಿಲ್ಲ. ಬೋಳಾರೆ ಗ್ರಾಮಸ್ಥರೂ ಕೂಡ ಸದರಿ ಸಂಘದಲ್ಲಿ ಸದಸ್ಯತ್ವ ಹೊಂದಿದ್ದರು. ತದನಂತರ ಗ್ರಾಮವು ನೆಟ್ಟಿಗೆರೆ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ ಇದರ ವ್ಯಾಪ್ತಿಗೆ ಸೇರಿರುತ್ತದೆ. ದಾಖಲಾತಿಗಳನ್ವಯ ಸದಸ್ಯರುಗಳು ರಾವುಗೋಡ್ಲು ಬೋಳಾರೆ ಅಂಚೆ ಎಂದು ನಮೂದಿಸಿರುತ್ತಾರೆ. ಶ್ರೀ ಅನಿಲ್ ಕುಮಾರ್ ಎಂಬುವವರು ರಾವುಗೋಡ್ಲು ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ ಇದರ ಸದಸ್ಯರಾಗಿರುತ್ತಾರೆ. ನೆಟ್ಟಿಗೆರೆ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಸದಸ್ಯರಾಗಿರುವುದಿಲ್ಲ. ಸದರಿಯವರು ಈ ಹಿಂದೆ ವೀರಸಂದ್ರ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ ಇದರಲ್ಲಿ ಪಡೆದಿದ್ದ ಸದಸ್ಯತ್ವಕ್ಕೆ ರಾಜಿನಾಮೆ ನೀಡಿರುವುದರಿಂದ ಸದರಿಯವರು ನಿಯಮ ಬಾಹಿರವಾಗಿ ಎರಡೂ ಕಡೆ ಸದಸ್ಯರಾಗಿರುವುದಿಲ್ಲ. ಅದಾಗ್ಯೂ ಸಂಬಂಧಪಟ್ಟ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಸದಸ್ಯತ್ವ/ನಿರ್ದೇಶಕ ಸ್ಥಾನ ನೀಡುವ ಜವಾಬ್ದಾರಿ ಆಯಾ ಆಡಳಿತ ಮಂಡಳಿಗೆ ಸೇರಿದ ವಿಷಯವಾಗಿರುತ್ತದೆ. ಈ ವಿಷಯದಲ್ಲಿ ಇಲಾಖಾಧಿಕಾರಿಗಳ ಯಾವುದೇ ಪಾತ್ರ ಇರುವುದಿಲ್ಲ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು 3ನೇ ವಲಯ, ಬೆಂಗಳೂರು ಇವರ ನ್ಯಾಯಾಲಯದಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ 70 ರಡಿ ದಾವಾ ದಾಖಲಾಗಿದ್ದು, ವಿಚಾರಣೆಯ ಹಂತದಲ್ಲಿದೆ. ಆದ್ದರಿಂದ ಇಲಾಖಾಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಬಾಲಕೃಷ್ಣರವರೇ, ನೀವು ಮಾತನಾಡುವ ಮೊದಲು ಒಂದು ವಿಷಯವನ್ನು ನಿಮ್ಮ ಗಮನಕ್ಕೆ ತಂದುಬಿಡುತ್ತೇನೆ. ನಿಯಮ 322ರ ಪ್ರಕಾರ ಯಾವುದೇ ವಿಚಾರ ನ್ಯಾಯಾಲಯದಲ್ಲಿ ತೀರ್ಪಿಗೆ ಬಾಕಿ ಇದ್ದರೆ ಅದನ್ನು ಇಲ್ಲಿ ಪ್ರಸ್ತಾಪ ಮಾಡುವ ಹಾಗಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅದು A.R. court ನಲ್ಲಿದೆ.

ಅಧ್ಯಕ್ಷರು : It is quasi judicial. ಈ ವಿಚಾರ ಕೋರ್ಟ್‌ನಲ್ಲಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನಾವು ಹೇಳುವುದಕ್ಕೆ ಅವಕಾಶ ಕೊಡಿ. ಮಾತನಾಡಲೇಬೇಡಿ ಎಂದು ನೀವು ಎಲ್ಲದಕ್ಕೂ ಕಡಿವಾಣ ಹಾಕುವುದಾದರೆ ಹೇಗೆ? ಅದಕ್ಕೆ A.R. court ನಲ್ಲೇನು stay ಇಲ್ಲ.

ಅಧ್ಯಕ್ಷರು : It is quasi judicial.

ಶ್ರೀ ಹೆಚ್.ಸಿ. ಬಾಲಕೃಷ್ಣ : A.R. court ಅವರ ಇಲಾಖೆಯ ಕೋರ್ಟ್. ಅವರು ಹೇಳಿದ ಹಾಗೆ ಕೇಳುತ್ತದೆ. ನಾವು ಹೇಳುವುದನ್ನು ಸ್ವಲ್ಪ ಕೇಳಿ. ನೀವು ಮಾತನಾಡಲೇ ಬಾರದು ಕುಳಿತುಕೊಳ್ಳಿ ಎಂದರೆ ನಾವು ಇನ್ನೇನೂ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಇದು ನಾನು ಮಾಡಿದ rules ಅಲ್ಲ. ನಾವೆಲ್ಲ ಸೇರಿ ಮಾಡಿದ Rules ಅನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಿಯಮ 322 ಪ್ರಕಾರ ಯಾವುದೇ ನ್ಯಾಯಾಲಯದಲ್ಲಿ ಬಾಕಿ ಇರುವುದನ್ನು....

ಶ್ರೀ ಹೆಚ್.ಸಿ. ಬಾಲಕೃಷ್ಣ : ಕೋರ್ಟಿಗೆ ಹಾಕಿರುವವರು ನಾವೇ ಸ್ವಾಮಿ. A.R. court ನಲ್ಲಿ stay vacate ಆಗುತ್ತದೆ ಎನ್ನುವುದನ್ನು ಬಿಟ್ಟರೆ ಬೇರೆ ಏನು ಕಾರಣಗಳಿರುತ್ತದೆ?

ಅಧ್ಯಕ್ಷರು : ವಿಚಾರಣೆಯ ಅಂತಿಮ ತೀರ್ಮ ಆಗಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನಾವು ಹೇಳುವುದನ್ನು ಸ್ವಲ್ಪ ಕೇಳಿ. ನಾವು ಹೇಳಿದ ಮೇಲೆ ನೀವು ಹೇಳಿ.

ಅಧ್ಯಕ್ಷರು : ಆದರೆ ತೀರ್ಪಿಗೆ ತೊಂದರೆಯಾಗುವ ರೀತಿಯಲ್ಲಿ ಅವಕಾಶವಾಗಬಾರದು. ಇರುವ ವಿಚಾರವನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಆ ಪ್ರಶ್ನೆಗೆ ಇನ್ನೊಂದು ಉತ್ತರವನ್ನು ಹೇಳುತ್ತೇನೆ. ಹಿಂದೆ ನಾನು ನಿಯಮ 351 ರಡಿಯಲ್ಲಿ ಒಂದು ಪ್ರಶ್ನೆ ಕೇಳಿದ್ದೆ. ನಿಮ್ಮ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ, ದಯಮಾಡಿ ಅವರ ಮೇಲೆ ಶಿಸ್ತು ಕ್ರಮವನ್ನು ತೆಗೆದುಕೊಳ್ಳಬೇಕು. ಇದು ನೀವೇ ಕೊಟ್ಟಿರುವ ಉತ್ತರ. ಆ ಸೊಸೈಟಿಯಲ್ಲಿ ದಿನಾಂಕ: 20–03–2005ರಲ್ಲಿ shareholder, share fee ಮತ್ತು ಪ್ರವೇಶ ಧನವನ್ನು ಪಾವತಿಸಿ ರಾವುಗೋಡ್ಲು ಸಂಘದಲ್ಲಿ ಸದಸ್ಯರಾಗಿರುತ್ತಾರೆ ಎಂದು ನಿಮ್ಮ ಅಧಿಕಾರಿಗಳು ಹೇಳಿದ್ದಾರೆ. ಕಾನೂನುಬದ್ಧವಾಗಿ ಅವರು ರಾವುಗೋಡ್ಲು ಸಂಘದಲ್ಲಿ ಸದಸ್ಯರಾಗುವುದಕ್ಕೆ ಸಾಧ್ಯವೇ ಇಲ್ಲ. ಅದು ನೆಟ್ಟಿಗೆರೆ ಸಂಘದ ವ್ಯಾಪ್ತಿಗೆ ಬರುತ್ತದೆ. ಅವರು ಅಲ್ಲಿ ಸದಸ್ಯರಾಗಬೇಕು. 2005ರಲ್ಲಿ ಅವರು

ರಾವುಗೋಡ್ಲು ಸಂಘದ ಸದಸ್ಯರಾಗಿದ್ದಾರೆ ಎಂದು ನಿಮ್ಮ ಅಧಿಕಾರಿಗಳೇ ಉತ್ತರ ಕೊಟ್ಟಿದ್ದಾರೆ. ನಿಮ್ಮ Audit Report ನಲ್ಲಿ ಏನಿದೆ ಎಂದರೆ, ಸಂಘದ ಅಧಿಕೃತ ಶೇರು ಬಂಡವಾಳ ರೂ.50,000 ಗಳಿದ್ದು, ಈ ರಾಜ್ಯದ ಜನರಿಗೆ ಯಾವ ರೀತಿ ತಪ್ಪು ದಾರಿ ತೋರಿಸುತ್ತಾರೆ, ಮಂತ್ರಿಗಳನ್ನು ಯಾವ ರೀತಿ ದಿಕ್ಕು ತಪ್ಪಿಸುತ್ತಾರೆ, ಸದನದಲ್ಲಿಯೂ ತಪ್ಪು ಹೇಳುತ್ತಾರೆಂದರೆ ಹೇಗೆ ಸ್ವಾಮಿ?

ಅಧ್ಯಕ್ಷರು : Section 70 ಪ್ರಕಾರ any cooperative dispute before the Assistant Registrar ಅಥವಾ District Level ನಲ್ಲಿ Joint Registrar ಎಂದು ಇದೆ. ಅದು ಮಾಡಿದಂಥ ಕಾಯ್ದೆ ಇದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನಾನು ನಿಯಮ 351ರ ಮೇರೆಗೆ ಪ್ರಶ್ನೆ ಕೇಳಿದ್ದೇನೆ.

ಅಧ್ಯಕ್ಷರು : Pending before the Court. ಮೊದಲು ಅಲ್ಲಿ ಇತ್ಯರ್ಥವಾಗಲಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಧಿಕಾರಿಗಳು ನಿಯಮ 351ಕ್ಕೆ ಕೇಳಿದ ಪ್ರಶ್ನೆಗೆ ಸದನಕ್ಕೆ ಯಾರು ಈ ರೀತಿ ತಪ್ಪು ಉತ್ತರ ಒದಗಿಸಿದ್ದಾರೆ ಅಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೇವೆಂದು ಮಂತ್ರಿಯವರು ಹೇಳಬೇಕಲ್ಲವೇ?

ಅಧ್ಯಕ್ಷರು : ಇದರ ಬಗ್ಗೆ ಹೆಚ್ಚಿಗೆ ಮಾತನಾಡಲಿಕ್ಕೆ ನಾನು ಅವಕಾಶ ಕೊಡುವುದಿಲ್ಲ. (ಗೊಂದಲ) ನ್ಯಾಯಾಲಯದಲ್ಲಿರುವಂಥ ಯಾವುದೇ ವಿಚಾರವನ್ನೂ ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇಲ್ಲ. (ಗೊಂದಲ) ನೀವು ಪುನಃ ಪುನಃ ಅದನ್ನೇ ಕೇಳುವುದಾದರೆ ಹೇಗೆ?

ಶ್ರೀ ಹೆಚ್.ಡಿ. ರೇವಣ್ಣ : ಈ ಸದನಕ್ಕೆ reply ಅನ್ನು ಮಂತ್ರಿಗಳ ಮೂಲಕ ಏನು ಕೊಡಿಸಿದ್ದಾರೆ, ಆ ರೀತಿ ಕೊಡುವ ಮೂಲಕ ಸದನವನ್ನು ತಪ್ಪು ದಾರಿಗೆಳೆದಿದ್ದಾರೆ, ಕಾನೂನು ರೀತಿ ಏನಿದೆ ಅದನ್ನು ಬಿಟ್ಟು ಅವರು ಕೊಟ್ಟಿರುವುದೇ ಒಂದು, ಅಲ್ಲಿರುವುದೇ ಒಂದು, ಸದನಕ್ಕೆ ತಪ್ಪು reply ಕೊಟ್ಟಿರುವುದು ಸರಿಯಲ್ಲ ಎಂದು ಆ ಉದ್ದೇಶದಿಂದ ಮಾನ್ಯ ಸದಸ್ಯರು ಕೇಳಿದ್ದಾರೆ. ಅದನ್ನು ಕೇಳಬೇಡಿ ಎಂದು ಹೇಳುವುದು ಸರಿಯಲ್ಲ. ಸದನಕ್ಕೆ ಸರಿಯಾದ ಉತ್ತರವನ್ನು ಕೊಡದಿದ್ದಾಗ ಪ್ರಶ್ನೆ ಕೇಳುವುದು ತಪ್ಪೇ? ಮಾನ್ಯ ಸದಸ್ಯರ ಹತ್ತಿರ ಸರಿಯಾದ ದಾಖಲೆ ಇದೆ. ಅದನ್ನಿಟ್ಟುಕೊಂಡು ಅವರು ಮಾತನಾಡುತ್ತಿದ್ದಾರೆ. ಸದನವನ್ನು ತಪ್ಪು ದಾರಿಗೆಳೆದಾಗ ಅವರೇನು

ಮಾಡಬೇಕು? 224 ಜನ ಸದಸ್ಯರಿರುವ ಈ ಸದನಕ್ಕೆ ಮಂತ್ರಿಗಳ ಕೈಯಲ್ಲಿ ಸುಳ್ಳು ಹೇಳಿಕೆ ಕೊಡಿಸಿದರೆ ಅದನ್ನು ನಾವು ನಂಬುವುದಕ್ಕಾಗುತ್ತದೆಯೇ? ಅದನ್ನು ನಮ್ಮ ಸದಸ್ಯರು question ಮಾಡಬೇಡಿ ಎಂದು ಹೇಳಿದರೆ ಅರ್ಥವೇನು? ಅಂದರೆ, ಸದನಕ್ಕೆ ತಪ್ಪು ಹೇಳಿಕೆ ಕೊಟ್ಟರೂ ಕೇಳದೆ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ?

(ಗೊಂದಲ)

ಅಧ್ಯಕ್ಷರು : The matter is pending before the court. ಈ Rules ಅನ್ನು ನಾನು ಮಾಡಿದ್ದಲ್ಲ. As per Rules ಈ ಸದನವನ್ನು ನಡೆಸಬೇಕಾಗುತ್ತದೆ. ನಡೆಸುತ್ತಿದ್ದೇನೆ. ನೀವು ಅದನ್ನೇ ಪ್ರಶ್ನೆ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ನೀವು ಸದನಕ್ಕೆ ಉತ್ತರ ಕೊಟ್ಟಿದ್ದೀರಿ. ಕೊಟ್ಟ ಮೇಲೆ ಅದರ ಮೇಲೆ ಚರ್ಚೆಯಾಗಬೇಕು.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ : ಇದು ಕೋರ್ಟ್‌ನಲ್ಲಿರುವುದರಿಂದ ಇದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲವೆಂದು ಮಂತ್ರಿಗಳು ಹೇಳಬಹುದಾಗಿತ್ತಲ್ಲ? ಉತ್ತರ ಕೊಟ್ಟ ಮೇಲೆ ಚರ್ಚೆ ಮಾಡಬೇಡಿ ಎಂದರೆ ಏನರ್ಥ?

(ಗೊಂದಲ)

ಅಧ್ಯಕ್ಷರು : ಚರ್ಚೆಗೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಹಾಗಾದರೆ, ಅವರು ಹೇಗೆ ಉತ್ತರ ಕೊಟ್ಟರು? ಉತ್ತರ ಕೊಟ್ಟ ಮೇಲೆ ಚರ್ಚೆ ಮಾಡಬೇಕಲ್ಲವೇ?

(ಗೊಂದಲ)

ಅಧ್ಯಕ್ಷರು : ಈ ವಿಷಯದ ಮೇಲೆ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಧ್ಯಕ್ಷರೆ, ಮಂತ್ರಿಗಳೇ ಉತ್ತರ ಕೊಟ್ಟಿದ್ದಾರೆ. ಉತ್ತರ ಕೊಟ್ಟ ಮೇಲೆ ಚರ್ಚೆಯಾಗಬೇಕಲ್ಲವೇ? ಇದನ್ನು ಕೊಟ್ಟಿದ್ದು ನಾವಲ್ಲ, ಸರ್ಕಾರ ಉತ್ತರ ಕೊಟ್ಟಿದೆ.

ಅಧ್ಯಕ್ಷರು : ಸರ್ಕಾರ ಹೇಳಿದ ಮೇಲೆ ನನ್ನ ಗಮನಕ್ಕೆ ತಂದಿದ್ದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಸಹಕಾರ ಸಚಿವರು) : ಈಗಾಗಲೇ A.R. Office ನಲ್ಲಿ, ನ್ಯಾಯಾಲಯದಲ್ಲಿರುವುದರಿಂದ ಅಲ್ಲೇನಾಗುತ್ತದೆ ಎಂದು ನೋಡಬೇಕಾಗುತ್ತದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅದನ್ನು ಈ ಉತ್ತರ ಕೊಡುವ ಮೊದಲೇ ಹೇಳಬಹುದಾಗಿತ್ತು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಸದಸ್ಯರು ಆಡಿಟ್ ರಿಪೋರ್ಟ್ ಬಂದಿದೆ ಎಂದೇನು ಹೇಳಿದರು, ಆ ಬಗ್ಗೆ ನಾನು ಆಡಿಟ್ ರಿಪೋರ್ಟ್ ತರಿಸಿಕೊಂಡು, ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಆ ರಿಪೋರ್ಟ್ ಅನ್ನು ನಾನು ತರಿಸಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಆ ಬಗ್ಗೆ ಇನ್ನೊಂದು ರೂಪದಲ್ಲಿ ನೋಟಿಸ್ ಕೊಡಿ, ಕ್ರಮ ತೆಗೆದುಕೊಳ್ಳೋಣ.

ಶ್ರೀ ಹೆಚ್.ಸಿ. ಬಾಲಕೃಷ್ಣ : ತಪ್ಪು ಮಾಹಿತಿ ಕೊಟ್ಟ ಆ ಅಧಿಕಾರಿ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅಧಿಕಾರಿಗಳು ತಪ್ಪು ಉತ್ತರ ಕೊಟ್ಟಿದ್ದಾರೆ, ಅವರ ಮೇಲೇನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಆಡಿಟ್ ರಿಪೋರ್ಟ್ ಬಂದ ಮೇಲೆ ಹೇಳುತ್ತೇನೆ. ಈಗ ಹೇಳುವುದಿಲ್ಲ. ಆಡಿಟ್ ರೀಪೋರ್ಟ್‌ನಲ್ಲೇನಿದೆ ಎಂದು ನೋಡುತ್ತೇನೆ. ಆಮೇಲೆ, ನಿಮಗೆ ಉತ್ತರ ಕೊಡಬೇಕಾದ ಸಂದರ್ಭದಲ್ಲಿ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ನಿಮ್ಮ ಅಧಿಕಾರಿಗಳು ತಪ್ಪು ಉತ್ತರ ಕೊಟ್ಟಿದ್ದಾರೆ. ನಾವು ಆಡಿಟ್ ರಿಪೋರ್ಟ್ ಎಲ್ಲ ನಿಮಗೆ ಕೊಟ್ಟಿದ್ದೇವೆ. ಆದರೆ, ನೀವು ಇಲ್ಲಿ ಉತ್ತರ ಕೊಡುವುದಕ್ಕೆ ರೆಡಿಯಾಗಿ ಬರದೆ ಆಡಿಟ್ ರಿಪೋರ್ಟ್ ನೋಡಿ ಹೇಳುತ್ತೇನೆ ಎಂದರೆ ಹೇಗೆ?

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಆ ಬಗ್ಗೆ ಬೇಕಾದರೆ ಬೇರೆ ರೂಪದಲ್ಲಿ ಪ್ರಶ್ನೆ ಕಳುಹಿಸಿ ಕೊಡಿ. ಆಗ ನಾನು ವಿವರವಾಗಿರುವ ಉತ್ತರವನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಈಗ ಈ ಪ್ರಶ್ನೆಗೆ ಉತ್ತರ ಹೇಳಿ. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ತಪ್ಪು ಮಾಹಿತಿ ಕೊಟ್ಟಿರುವ ಅಧಿಕಾರಿಗಳ ಮೇಲೇನು ಕ್ರಮ ತೆಗೆದುಕೊಳ್ಳುತ್ತಾರೆ. ಆ ಸದಸ್ಯ ತಪ್ಪು ಮಾಹಿತಿ ಯನ್ನೊದಗಿಸಿ ಮೆಂಬರ್ /Director ಆಗಿದ್ದಾನೆ. ಅವನ ಮೇಲೇನು ಕ್ರಮ ತೆಗೆದುಕೊಳ್ಳುತ್ತಾರೆನ್ನುವ ಬಗ್ಗೆ ಮಂತ್ರಿಗಳು ಉತ್ತರ ಹೇಳಬೇಕು. ನೀವು ಇಲ್ಲಿ ಪರಿಶೀಲನೆ ಮಾಡುತ್ತೇವೆ, ಪರಿಗಣನೆ ಮಾಡುತ್ತೇವೆ ಎನ್ನುವುದು ಉತ್ತರವಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಆ ಸದಸ್ಯರಿರತಕ್ಕಂಥವರು ತಪ್ಪು ಮಾಹಿತಿಯನ್ನು ಕೊಟ್ಟು elect ಆಗಿದ್ದಾರೆನ್ನುವ ಆಪಾದನೆ ಇದೆ. ಈಗಾಗಲೇ ಆ ಕೇಸ್ A.R. Office ನಲ್ಲಿ ನಡೆಯುತ್ತಿದೆ. ಅಲ್ಲಿಂದ ಏನು ನಿರ್ಣಯ ಬರುತ್ತದೆ ಅದರ ಮೇಲೆ ನಿರ್ಧಾರ ತೆಗೆದುಕೊಳ್ಳಬಹುದು. ಆಮೇಲೆ ಬೇಕಾದರೆ appeal ಮಾಡಿಕೊಳ್ಳಬಹುದು.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ನಿರ್ಣಯ ಏನಾದರೂ ಆಗಲಿ. ನಿರ್ಣಯದ ಬಗ್ಗೆ ಪ್ರಶ್ನೆ ಮಾಡುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಮಂತ್ರಿಗಳಿಗೆ ಇದೇ ರೀತಿಯಾಗಿ ಉತ್ತರ ಬೇಕೆಂದು ಒತ್ತಾಯ ಮಾಡುವ ಹಾಗಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಧಿಕಾರಿಗಳು ಸದನವನ್ನು ತಪ್ಪು ದಾರಿಗೆಳೆದಿದ್ದಾರೆ. ಅದಕ್ಕೇನು ಮಂತ್ರಿಗಳು ಉತ್ತರ ಕೊಡುತ್ತಾರೆ? ತಪ್ಪು ಮಾಹಿತಿ ಕೊಟ್ಟು ಸದಸ್ಯರೇನಾಗಿದ್ದಾರೆ ಅವರನ್ನು ಅಮಾನತು ಮಾಡಿ. ಅಲ್ಲಿಂದ ನಿರ್ಣಯ ಕೊಟ್ಟಮೇಲೆ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಿ. Suspend ಮಾಡುತ್ತೀರೋ ಅಥವಾ ಕ್ರಮ ತೆಗೆದುಕೊಳ್ಳುತ್ತೀರೋ? ಎನ್ನುವುದನ್ನು ಸದನದಲ್ಲಿ ಹೇಳಿ. ನಿರ್ಣಯ ಬೇರೆ, ತಪ್ಪು ಮಾಹಿತಿ ನೀಡಿರುವುದು ಬೇರೆ. ಅಧಿಕಾರಿಗಳು ಮಂತ್ರಿಗಳ ಮೂಲಕ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಇದಕ್ಕೇನು ಕ್ರಮ ತೆಗೆದುಕೊಳ್ಳುತ್ತೀರಿ. A.R. Office ನಲ್ಲಿ ಕೇಸ್ ನಡೆಯುತ್ತಿದ್ದು, ಅಲ್ಲೇನು decision ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ. ತಪ್ಪು ಮಾಹಿತಿ ಕೊಟ್ಟವರ ಮೇಲೇನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಅದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಇ) ವಿಷಯ : ಹಾಸನ ತಾಲ್ಲೂಕಿನ ಚಿಕ್ಕಕೊಂಡಗುಳ ಗ್ರಾಮದ ಸರ್ವೆ ನಂಬರ್ 73ರಲ್ಲಿನ ಒಂದು ಎಕರೆ ಜಮೀನನ್ನು ಸರ್ಕಾರದ ಉಪಯೋಗಕ್ಕೆ ಮೀಸಲಿಡುವ ಕುರಿತು :

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ) : ಮಾನ್ಯ ಅಧ್ಯಕ್ಷರೆ, ಹಾಸನ ತಾಲ್ಲೂಕಿನ ಚಿಕ್ಕಕೊಂಡಗುಳ ಗ್ರಾಮದ ಸರ್ವೆ ನಂಬರ್ 73ರಲ್ಲಿನ ಒಂದು ಎರಕೆ ಜಮೀನನ್ನು ಸರ್ಕಾರದ ಉಪಯೋಗಕ್ಕೆ ಮೀಸಲಿಡುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ,

ಹಾಸನ ತಾಲ್ಲೂಕು, ಚಿಕ್ಕಕೊಂಡಗುಳ ಗ್ರಾಮದ ಸ.ನಂ.73ರಲ್ಲಿ 1.00 ಎಕರೆ ಜಮೀನನ್ನು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 105 ಎಲ್‌ಜಿಪಿ 77, ದಿ: 01.09.1977 ರನ್ವಯ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವಂತೆ ಸಲ್ಲಿಸಿದ ಮನವಿಯ ಮೇರೆಗೆ ತಹಶೀಲ್ದಾರರು ಟಿಟಿಸಿ 26/78–79, ದಿ: 20.12.1978ರಲ್ಲಿ ಶ್ರೀ ಹೆಚ್. ವೆಂಕಟಕೃಷ್ಣಪ್ಪ ಇವರಿಗೆ ಮಂಜೂರು ಮಾಡಿ ಹಂಗಾಮಿ ಸಾಗುವಳಿ ಚೀಟಿ ನೀಡಲಾಗಿರುತ್ತದೆ. ನಂತರ ಸದರಿ ಜಮೀನಿಗೆ ದಿ: 12.07.1993ರಲ್ಲಿ ಖಾಯಂ ಸಾಗುವಳಿ ಚೀಟಿ ನೀಡಲಾಗಿರುತ್ತದೆ. ನಂತರ ಮುಂಜೂರಿದಾರರ ಪಾವತಿ ನಂತರ ಅವರ ವಾರಸುದಾರರಾದ ಶ್ರೀಮತಿ ಸುಶೀಲ ಕೋಂ ಶ್ರೀನಿವಾಸಮೂರ್ತಿರವರಿಗೆ ಹಕ್ಕು ದಾಖಲಾಗಿರುತ್ತದೆ.

ಈ ಜಮೀನಿನ ಮಂಜೂರಾತಿಯನ್ನು ಶ್ರೀ ಬಿ.ಟಿ. ಗಿರಿಜಾ ಶಂಕರ್ ಮತ್ತು ಇತರರು ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯನ್ನು ತಿರಸ್ಕರಿಸಿ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಆದೇಶಿಸಲಾಗಿರುತ್ತದೆ.

ಈ ಬಗ್ಗೆ ಗಿರಿಜಾ ಶಂಕರ್ ಮತ್ತು ಇತರರು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ಅಪೀಲು ಸಂಖ್ಯೆ:266/94ರಂತೆ ಮೇಲ್ಮನವಿ ಸಲ್ಲಿಸಿದ್ದು, ದಿ: 17.04.1996ರ ಮೇಲ್ಮನವಿ ತಿರಸ್ಕರಿಸಲಾಗಿರುತ್ತದೆ.